# ಸ್ವಪ್ನಸುಂದರಿಯ ನಿರ್ಗಮನ





**ಭಾರತೀಯ ಚಿತ್ರರಂಗದ 'ಏಕಮೇವ ಲೇಡಿ ಸೂಪರ್‌ಸ್ಟಾರ್' ಇನ್ನು ನೆನಪು ಮಾತ್ರ!**

**■ ಪ್ರವೀಣ ಕುಲಕರ್ಣಿ**

ಅತಿಶಯ ಎನಿಸುವಂತಹ ಚೆಲುವು, ಆ ಚೆಲುವಿಗೆ ಸರಿಸಮನಾದ ನಟನಾ ಪ್ರತಿಭೆ, ವಯಸ್ಸಿನ ಹಂಗಿಗೆ ಸಿಲುಕದಂತಹ ಆಕರ್ಷಕ ಮೈಮಾಟ, ಬಾಲಿವುಡ್‌ನ ಸೂಪರ್‌ಸ್ಟಾರ್ ಪಟ್ಟಕ್ಕೇರಿಸಲು ಪದತಲದವರೆಗೆ ಬಂದು ಬಿದ್ದ ಅವಕಾಶ, ಸಂತೃಪ್ತಿ ನೀಡುವಂತಹ ತುಂಬು ಕುಟುಂಬ. ಅಬ್ಬಬ್ಬಾ.. ಶ್ರೀದೇವಿಯವರ ಸ್ಥಾನದಲ್ಲಿ ಬೇರೆ ಯಾರಿದ್ದರೂ ಅವರು ನಿಜಕ್ಕೂ ಸ್ವರ್ಗಕ್ಕೆ ಕಿಚ್ಚನ್ನೇ ಹಚ್ಚುತ್ತಿದ್ದರು. ಆದರೆ, ಇಷ್ಟೆಲ್ಲ ವೈಭೋಗವಿದ್ದರೂ ಈ ನಟಿಯ ಒಡಲಲ್ಲಿ ಮಾತ್ರ ನೋವಿನ ಕಿಚ್ಚೇ ತುಂಬಿಕೊಂಡಿತ್ತು.

ಸೆಲೆಬ್ರಿಟಿಯೊಬ್ಬರ ಖಾಸಗಿ ಜೀವನ ಹೊರಜಗತ್ತು ನೋಡುವುದಕ್ಕಿಂತ ಹೇಗೆ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ ಎನ್ನುವುದಕ್ಕೆ ಈ ನಟಿಯ ಬದುಕು ಒಂದು ಉತ್ತಮ ನಿದರ್ಶನ.

ಬಾಲ್ಯದಲ್ಲಿ ಅಮ್ಮನ ರಕ್ಷಣಾ ಪಂಜರದಲ್ಲಿ ಬಂಧಿಯಾಗಿದ್ದ 'ಗೊಂಬೆ'ಯಿಂದ ಹಿಡಿದು, ಸೌಂದರ್ಯದ ದೇವತೆಯಾಗಿ ಕಪೂರ್ ಕುಟುಂಬದ 'ಬೋನಿ'ನೊಳಗೆ ಬೀಳುವವರೆಗೆ, ಝುಗಮುಗಿಸುವ ಮಾಯಾ–ಲೋಕದ ಹಿಂದಿದ್ದ ಶ್ರೀದೇವಿಯವರ ಕತ್ತಲೆ ಬದುಕಿನ ಮೇಲೆ ಖ್ಯಾತ ನಿರ್ದೇಶಕ